## ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ , ಕಾರವಾರ

Civil Misc. 9-2018 P.W: 1

Witness recalled and duly sworn on 29-08-2022.

**ಪಾಟೀ ಸವಾಲು ಃ ಶ್ರೀ ಎನ್ ಎಮ್ ಎಮ್ ವಕೀಲರಿಂದ ಃ**

ಅಸಲು ದಾವಾ ಸಂಖ್ಯೆ 85/2018 ಇನ್ನು ಚಾಲ್ತಿಯಲ್ಲಿದೆ ಎಂದರೆ ಸರಿ . ದಾರಿಯ ಸಲುವಾಗಿ ಸದ್ರಿ ದಾವೆಯನ್ನು ಪ್ರತಿವಾದಿಯ ವಿರುದ್ಧ ಹೂಡಿದ್ದೇನೆ . ದಾವೆ ಹೂಡುವ ಸಮಯದಲ್ಲಿ ಕಾರವಾರ ಇಳಕಲ್ ರಸ್ತೆಯ ಕಾಮಗಾರಿ ಚಾಲ್ತಿಯಲ್ಲಿತ್ತು ಎಂದರೆ ಸರಿ . ಆಗಿನ ಗುತ್ತಿಗೆದಾರ ರಸ್ತೆಯ ಕಾಮಗಾರಿಯ ಸಲುವಾಗಿ ರಸ್ತೆಯ ಎರಡು ಬದಿಗಳಲ್ಲಿ ಸಹ ಮಣ್ಣನ್ನು ತಂದು ಹಾಕುತ್ತಿದ್ದ ಎಂದರೆ ಸಾಕ್ಷಿಯು ಅದಕ್ಕೂ ನಮಗೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ಕಾರವಾರ ಇಳಕಲ್ ರಸ್ತೆಗೆ ತಾಗಿ ದಾವಾ ಸರ್ವೆ ನಂಬರ್ ನ ಜಮೀನುಗಳು ಇವೆ ಎಂದರೆ ಸರಿ . ನನ್ನ ಸರ್ವೆ ನಂಬರ್ 26/1. ಸರ್ವೆ ನಂಬರ 26/3 ಎದ್ರುದಾರರ ಜಮೀನು ಎಂದರೆ ಸರಿ . ರಸ್ತೆಯನ್ನು ಬಂದ್ ಮಾಡಲಾಗಿದೆ ಎಂದು ತಾತ್ಕಾಲಿಕ ನಿರ್ಬಂಧಕಾಜ್ಞೆ ಹೂಡಿ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ 85/2018 ರಲ್ಲಿ ನನ್ನ ಸಾಕ್ಷ್ಯ ಮುಗಿದಿದೆ ಎಂದರೆ ಸರಿ . ನಾನು ಹೇಳಿದಂತೆ ಅಲ್ಲಿ ಯಾವುದೇ ರಸ್ತೆ ಇಲ್ಲ ಎಂದು ಪಂಚಾಯತ್ ಅವರು ಒಂದು ಪ್ರಮಾಣ ಪತ್ರ ನೀಡಿದ್ದಾರೆ ಎಂದರೆ ಸರಿಯಲ್ಲ . ದಿನಾಂಕ 10-03-2020 ರಂದು ಮಧ್ಯಂತರ ತಾತ್ಕಾಲಿಕ ನಿರ್ಬಂಧಕಾಜ್ಞೆ ಯನ್ನು ನ್ಯಾಯಾಲಯ ನಿಖಾಲಿ ಮಾಡಿದೆ ಎಂದರೆ ಸರಿ . ಎದ್ರುದಾರರು ನ್ಯಾಯಲಯ ನೀಡಿದ ಮಧ್ಯಂತರ ತಾತ್ಕಾಲಿಕ ನಿರ್ಬಂಧಕಾಜ್ಞೆ ಉಲ್ಲಂಘನೆ ಮಾಡಿದ್ದಾರೆ ಎಂದು ಹೇಳಲು ನಾನು ಯಾವುದೇ ಸಾಕ್ಷ್ಯ ನೀಡಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರಿದು ನಾನು 2 ಸಾಕ್ಷಿಗಳನ್ನು ಹಾಜರು ಮಾಡಿದ್ದೇನೆ ಎಂದು ನುಡಿಯುತ್ತಾರೆ . ಎದ್ರುದಾರರ ಯಾವುದೇ ಮಧ್ಯಂತರ ತಾತ್ಕಾಲಿಕ ನಿರ್ಬಂಧಕಾಜ್ಞೆ ಯನ್ನು ಉಲ್ಲಂಘನೆ ಮಾಡಿಲ್ಲ ಎಂದರೆ ಸರಿಯಲ್ಲ . ನಾನು ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ . ನನ್ನ ಜಮೀನು ರಸ್ತೆಯ ಮುಂಭಾಗದಲ್ಲಿ ಬರುವುದರಿಂದ ಎದ್ರುದಾರರು ರಸ್ತೆಯನ್ನು ಬಂದ್ ಮಾಡುವ ಯಾವುದೇ ಪ್ರಮೇಯ ಉದ್ಭವಿಸುವುದಿಲ್ಲ ಎಂದರೆ ಸರಿಯಿಲ್ಲ . ತಪ್ಪು ಮಾಹಿತಿಯಿಂದ ಈ ಪ್ರಕರಣವನ್ನು ದಾಖಲು ಮಾಡಲಾಗಿದ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು).**

**ಓ. ಹೇ.ಕೇ. ಸರಿ ಇದೆ.**

**ಪ್ರ . ಸಿವಿಲ್ ಜಡ್ಜ, ಕಾರವಾರ**